ನೆನಪಿಗೆ ನಿನ್ನ ಬಳಿ ಇರಲಿ" ಎಂದು ಹೇಳಿ ಆ ಸೈಕಲ್ಲನ್ನು ಕಮಲಾನಾಥನಿಗೆ ನೀಡಿದ್ದರು. ಮಾಸ್ತರು ತನ್ನ ಅಣ್ಣನ ಬಳಿ ಖರೀದಿಸಿದ ಸೈಕಲ್ಲು ಅದು. ಅವರು ಬಳಸುವಾಗಲೇ ಹಳೆಯದು. ಆದರೆ ಮಾಸ್ತರು ಅದನ್ನು ಚೆನ್ನಾಗಿ ಸಾಕಿದರು! ತಾನು ಆ ಸೈಕಲ್ ಇಟ್ಟುಕೊಳ್ಳಲು ಕಮಲಾನಾಥನಿಗೆ ಏನೋ ಸಂಕೋಚ. ಮಾಸ್ತರು ಅಘನಾಶಿನಿಗೆ ಹೋಗಿ ವಾಸಿಸತೊಡಗಿದ ಮೇಲೆ ಒಂದು ಸಲ ಕಮಲಾನಾಥ ಬೆಟ್ಕುಳಿ ಬದಿಯಿಂದ ನದಿ ದಾಟಿ, ಆ ಸೈಕಲ್ ಮೇಲೇ ಅಘನಾಶಿನಿಗೂ ಹೋಗಿಬಂದಿದ್ದ. ''ಸೈಕಲ್ಲನ್ನು ಮಾಸ್ತರೇ ಇಟ್ಟುಕೊಳ್ಳಬೇಕು, ಇಲ್ಲಿ ಅವರ ಓಡಾಟಕ್ಕೆ ಅನುಕೂಲವಾಗ್ತದೆ" ಎಂದು ಒಂದೇಸವನೆ ಹೇಳತೊಡಗಿದ. ಅಘನಾಶಿನಿಯ ವಾನಪ್ರಸ್ಥ ಜೀವನಕ್ಕೂ, ಸೈಕಲ್ ಹೊಡೆಯದಿರುವುದಕ್ಕೂ ಏನು ಸಂಬಂಧವೋ, ಯಾರು ಹೇಳಬಲ್ಲರು! ಕಮಲಾನಾಥನಿಗಿಂತ ಬಲವಾಗಿ ಹೆಡ್‌ಮಾಸ್ಟರು ಮತ್ತೆ ಸೈಕಲ್ ಹೊಡೆಯಲು ನಿರಾಕರಿಸಿದರು. ಆದರೆ ಹಿರೇಗುತ್ತಿಗೆ ಬಂದಾಗ ಅಲ್ಲಿಯ ಓಡಾಟಗಳಿಗೆ ಖಂಡಿತಾ ಸೈಕಲ್ ಉಪಯೋಗಿಸುವೆ ಎಂದು ಕಮಲಾನಾಥನನ್ನು ಸಮಾಧಾನ ಪಡಿಸಿದರು. "ಮಾಸ್ತರರ ಹಾಗೇ ಕಾಳಜಿಯಿಂದ ಸೈಕಲ್ ನೋಡಿಕೋ. ನೀನೆಷ್ಟು ಚೆನ್ನಾಗಿ ನೋಡಿಕೊಳ್ಳುತ್ತೀಯೋ, ಅಷ್ಟೂ ಸೈಕಲ್ ಬಾಳಿಕೆ ಬರುತ್ತದೆ" ಎಂದು ರಾಧಕ್ಕ ಸಮಾಧಾನದ ಮಾತು ಹೇಳಿದರು. ಅವರು ಕೊಟ್ಟ ಅವಲಕ್ಕಿಶೇವು, ಕಷಾಯ ಕುಡಿದು ಕಮಲಾನಾಥ ಹೊರಟು ನಿಂತಿದ್ದನ್ನು ಮಾಸ್ತರು ಇನ್ನೂ ಮರೆತಿಲ್ಲ.

ಇಷ್ಟು ವರ್ಷಗಳ ಬಳಿಕವೂ ಸೈಕಲ್ ಹಾಗೇ ಇದೆ! ಕಮಲಾನಾಥ ಇಲ್ಲೇ ಇದ್ದಾನೆ ಎಂದಾಯಿತು, ಮಲಗಿರಬೇಕು. ಪ್ರೀತಿಯಿಂದ ಸೈಕಲ್ಲನ್ನು ನೇವರಿಸಿದರು. ಗಾಢ ಸಮಾಧಿಯಿಂದ ಎಚ್ಚರಗೊಂಡ ಸೈಕಲ್ಲು ತನ್ನೆದುರು ಹೆಡ್‌ಮಾಸ್ಟರು ನಿಂತಿರುವುದನ್ನು ಕಂಡು "ನಮಸ್ಕಾರ ಸರ್" ಎಂದಿತು. ಮಾಸ್ತರಿಗೆ ಮನಸು ತುಂಬಿಬಂತು. ಒಂದೆರಡು ನಿಮಿಷ ಬಿಟ್ಟು "ಒಂದು ಸುತ್ತು ಓಡಾಡಿ ಬರೋಣವೇ?" ಎಂದು ಕೇಳಿದರು. ಸೈಕಲ್ ಖುಷಿಯಿಂದ ಒಪ್ಪಿಕೊಂಡಿತು.

ಮಾಸ್ತರನ್ನು ಸೀಟಿನ ಮೇಲೆ ಕೂರಿಸಿಕೊಂಡು ಸೈಕಲ್ಲು ನಿಧಾನವಾಗಿ ಡಾಂಬರು ರಸ್ತೆಗೆ ಬಂದು ಮಣಿಭದ್ರ ಶೆಟ್ಟರ ಅಂಗಡಿ, ಕನ್ನಡ ಶಾಲೆ, ನಾಡೋರ ಕೇರಿ ದಾಟಿ ಹೈಸ್ಕೂಲಿಗೆ ಬಂದಿತು. ಅಲ್ಲೀಗ ಕಾಲೇಜೂ ಬಂದಿದೆ. ಸುಮಾರು ಮೂವತ್ತು ವರ್ಷ ಅವರು ಇಲ್ಲಿ ಪಾಠ ಹೇಳಿದ್ದಾರೆ. ಅವರನ್ನು ಆ ದಿನಗಳಂತೆ ಇಂದೂ ಕರೆದುಕೊಂಡು ಬಂದ ಸೈಕಲ್ ತನ್ನ ಸ್ಥಳದಲ್ಲಿ ವಿಧೇಯ ವಿದ್ಯಾರ್ಥಿಯಂತೆ ನಿಂತುಕೊಂಡಿತು. ಏನನ್ನೋ ನೆನೆಯುತ್ತ, ತಮ್ಮ ಪ್ರೀತಿಯ ಕಗ್ಗದ ಸಾಲುಗಳನ್ನು ಹೇಳಿಕೊಳ್ಳುತ್ತ ಮಾಸ್ತರು ಇಡೀ ಶಾಲೆ ತುಂಬ ಓಡಾಡಿ ಸಂಭ್ರಮಿಸಿದರು. ಅವೆಷ್ಟೋ ವಿದ್ಯಾರ್ಥಿಗಳು, ಅವೆಷ್ಟೋ ತರಗತಿಗಳು, ಪಾಲಕರು, ಗ್ಯಾದರಿಂಗ್‌ಗಳು, ಮೋಜಿನ, ಪೇಚಿನ ಪ್ರಸಂಗಗಳು ಎಲ್ಲವನ್ನೂ ನೆನೆಯುತ್ತ ಭೂತಕಾಲದ ಕೋಶದಲ್ಲಿ ಇವೆಲ್ಲವೂ ಯಥಾವತ್ತು ದಾಖಲುಗೊಂಡಿವೆಯಲ್ಲ ಎಂದು ಅಚ್ಚರಿಪಟ್ಟರು.

ಮೆಚ್ಚಿನ ಹಿರೇಗುತ್ತಿಯ ನೆಲದ, ಗಾಳಿಯ ಸಂಪರ್ಕದಿಂದ ಹೆಡ್‌ಮಾಸ್ಟರರ ಚೈತನ್ಯವು ಹೊಸ ಉಲ್ಲಾಸವನ್ನೇ ಪಡೆಯಿತು. ಶಕ್ತಿವರ್ಧಕ ಸೇವಿಸಿದಂತೆ ಅವರ ಕಾಲುಗಳಲ್ಲಿ ಬಲ! ತನ್ನೊಳಗೇ ಹಾಡು ಗುನುಗಿಕೊಳ್ಳುತ್ತಾ ಮಾದನಗೇರಿಯವರೆಗೂ ಸೈಕಲ್ಲಿನಲ್ಲಿ ಸವಾರಿಹೋದರು. ವಾಪಸು ಬಂದು ಈಶ್ವರಕೆರೆಯ ಎದುರು ಸ್ವಲ್ಪ ಹೊತ್ತು ಕೂತರು. ಅದೇನು ಉತ್ಸಾಹವೋ, ನುಶೀಕೋಟೆಗೂ ಹೋಗಿಬಂದರು. ಅಲ್ಲಿ ಒಂದು ದಿಕ್ಕಿನಿಂದ ಅಘನಾಶಿನಿನದಿಯ ಕಡೆಯ ತಂಗಾಳಿ ಬಂದು ಅವರನ್ನು ಸೋಕಿ ಕಡೆಗೆ ಅವರೊಳಗೇ ಇಳಿಯಿತು. ಅಲ್ಲಿಯ ದೇವಾಲಯದಲ್ಲಿ ಅನೇಕ ವರ್ಷಗಳ ಹಿಂದೆ ಅಷ್ಟಬಂಧ ನಡೆದಾಗ ಪೂಜೆಗೆ ಬಂದ ಸಾಂಭಟ್ಟರು